<u>ಸಿವಿಲ್ ನ್ಯಾಯಾಧೀಶರು ಮತ್ತು ಪ್ರ.ದ.ನ್ಯಾ.ದಂ.ರವರ ನ್ಯಾಯಾಲಯಃ ಕೊಪ್ಪ</u>

<u>ಸಿ.ಸಿ. ನಂ.*38/2025*</u>

***<u>ಫಿರ್ಯಾದುದಾರರುಃ</u>*** **ಸರ್ಕಾರದ ಪರವಾಗಿ ಕೊಪ್ಪ ಪೊಲೀಸರು**

**ವಿರುದ್ಧ**

| | | |
|---|---|---|
| *ಆರೋಪಿ/ತರುಃ* | 1 | ರವಿಶಂಕರ್ ಬಿನ್ ಲೇಟ್ ರಾಮಯ್ಯ, 59 ವರ್ಷ, ವ್ಯಾಪಾರ ವೃತ್ತಿ, ವಾಸ ತೋಪಣ್ಣನ ಬೀದಿ, ತರಿಕೆರೆ, ಚಿಕ್ಕಮಗಳೂರು ಜಿಲ್ಲೆ. |
| | 2 | ಯತಿನ್ ಆರ್. ಬಿನ್ ರವಿಶಂಕರ್, 29 ವರ್ಷ, ವ್ಯಾಪಾರ ವೃತ್ತಿ, ವಾಸ ಜೋಹಿಸ್ ಕಾಂಪೌಂಡ್, ಮೇಲಿನಪೇಟೆ, ಕೊಪ್ಪ ತಾಲ್ಲೂಕು. |
| | 3 | ಗಗನ್ ಆರ್ ಬಿನ್ ರವಿಶಂಕರ್, 25 ವರ್ಷ, ವ್ಯಾಪಾರ ವೃತ್ತಿ, ವಾಸ ತೋಪಣ್ಣನ ಬೀದಿ, ತರಿಕೆರೆ, ಚಿಕ್ಕಮಗಳೂರು ಜಿಲ್ಲೆ. |

***<u>ದೋಷಾರೋಪಣೆ</u>***

ಶ್ರೀಮತಿ ನಂದಿನಿ ಎಂ.ಎನ್. ಬಿ.ಎ., ಎಲ್.ಎಲ್.ಬಿ., ಸಿವಿಲ್ ನ್ಯಾಯಾಧೀಶರು ಮತ್ತು ಪ್ರದನ್ಯಾದಂಃ ಕೊಪ್ಪ ಆದ ನಾನು ಮೇಲ್ಕಂಡ ಆರೋಪಿತರಾದ ನಿಮ್ಮ ಮೇಲೆ ಮಾಡುವ ದೋಷಾರೋಪಣೆ ಏನೆಂದರೆಃ

ದಿನಾಂಕ 23.10.2024 ರಂದು ಕೊಪ್ಪ ಪೊಲೀಸ್ ಠಾಣಾ ವ್ಯಾಪ್ತಿಗೆ ಸೇರಿದ ಕೊಪ್ಪ ಪಟ್ಟಣದ ಕಾಯಿ ಮಾರುಕಟ್ಟೆಯಲ್ಲಿರುವ ಎಸ್ .ಆರ್. ಮಂಜುನಾಥ ರವರ ಬಾಬ್ತು ಸ್ವಾತಿ ಟ್ರೇಡರ್ಸ್ ಮೇಲ್ಭಾಗದಲ್ಲಿರುವ ವಾಸದ ಮನೆಯ ಮುಂಭಾಗದಲ್ಲಿ ಆರೋಪಿತರಾದ ನೀವು ಸಮಾನ ಉದ್ದೇಶದಿಂದ ಚಾಸಾ.1 ವರುಣ್ ಮತ್ತು ಚಾಸಾ.2 ಮಂಜುನಾಥ ರವರನ್ನು ನಿಮ್ಮ ಪೈಕಿ 2 ನೇ ಆರೋಪಿತನು ಮಾತನಾಡಬೇಕು ಮೇಲೆ ಬನ್ನಿ ಎಂದು ಕರೆದು ಅಂಗಡಿಯ ಮೇಲ್ಭಾಗದ ಮನೆಯ ಮುಂಭಾಗದ ವರಾಂಡದಲ್ಲಿ 1 ರಿಂದ 3 ನೇ ಆರೋಪಿಗಳಾದ ನೀವು ಚಾಸಾ.1 ಮತ್ತು 2 ರವರಿಗೆ ಅವಾಚ್ಯ ಶಬ್ದಗಳಿಂದ ಬೈಯ್ದು ಅವಮಾನ ಮಾಡಿದ್ದೀರಿ, ಆ ಮೂಲಕ ನೀವು **ಭಾರತೀಯ ನ್ಯಾಯ ಸಂಹಿತ (ಬಿ.ಎನ್.ಎಸ್.), 2023 ಕಲಂ 352 ಸಹ ಕಲಂ 3(5)**ರ ರೀತ್ಯಾ ಶಿಕ್ಷಾರ್ಹವಾದ ಅಪರಾಧವನ್ನು ನ್ಯಾಯಾಲಯದ ಸಂಜ್ಞೆಯಲ್ಲಿ ಮಾಡಿರುತ್ತೀರಿ.

ಮೇಲ್ಕಂಡ ದಿನಾಂಕ, ಸಮಯ ಮತ್ತು ಸ್ಥಳದಲ್ಲಿ 1 ರಿಂದ 3 ನೇ ಆರೋಪಿತರಾದ ನೀವು ಸಮಾನ ಉದೇಶದಿಂದ ಮುಂದುವರೆದು ನಿಮ್ಮ ಪೈಕಿ 2 ಮತ್ತು 3 ನೇ ಆರೋಪಿತರಾದ ನೀವು ನಿಮ್ಮ ಕೈಗಳಿಂದ ಚಾಸಾ.1 ರವರ ಬಲಭುಜಕ್ಕೆ, ಚಾಸಾ.2 ರವರ ಬಲ ತೋಳಿಗೆ ಹಾಗೂ ಚಾಸಾ.3 ಪ್ರಕಾಶರವರಿಗೆ ಕೈಯಿಂದ ಹೊಡೆದು ಸಾಮಾನ್ಯ ಸ್ವರೂಪದ ಗಾಯವನ್ನುಂಟು ಮಾಡಿದ್ದೀರಿ. ಆ ಮೂಲಕ ನೀವು **ಭಾರತೀಯ ನ್ಯಾಯ ಸಂಹಿತ (ಬಿ.ಎನ್.ಎಸ್.), 2023 ಕಲಂ 115(2) ಸಹ ಕಲಂ 3(5)** ರ ರೀತ್ಯಾ ಶಿಕ್ಷಾರ್ಹವಾದ ಅಪರಾಧವನ್ನು ನ್ಯಾಯಾಲಯದ ಸಂಜ್ಞೆಯಲ್ಲಿ ಮಾಡಿರುತ್ತೀರಿ.

ಮೇಲ್ಕಂಡ ದಿನಾಂಕ, ಸಮಯ ಮತ್ತು ಸ್ಥಳದಲ್ಲಿ 1 ರಿಂದ 3 ನೇ ಆರೋಪಿತರಾದ ಸಮಾನ ಉದ್ದೇಶದಿಂದ ಮುಂದುವರೆದು ಚಾಸಾ.1 ರಿಂದ ಚಾಸಾ.3 ರವರಿಗೆ ನಿಮ್ಮ ಪೈಕಿ 1 ನೇ ಆರೋಪಿಯಾದ ನೀವು ನಿನ್ನನ್ನು ಸಮ್ಮನೆ ಬಿಡುವುದಿಲ್ಲವೆಂದು ಕೊಲೆ ಮಾಡುವುದಾಗಿ ಕೊಲೆ ಬೆದರಿಕೆ ಹಾಕಿದ್ದೀರಿ. ಆ ಮೂಲಕ ನೀವು **ಭಾರತೀಯ ನ್ಯಾಯ ಸಂಹಿತ (ಬಿ.ಎನ್.ಎಸ್.), 2023 ಕಲಂ 351(2) ಸಹ ಕಲಂ 3(5)** ರೀತ್ಯಾ ಶಿಕ್ಷಾರ್ಹವಾದ ಅಪರಾಧವನ್ನು ನ್ಯಾಯಾಲಯದ ಸಂಜ್ಞೆಯಲ್ಲಿ ಮಾಡಿರುತ್ತೀರಿ.

ಮೇಲ್ಕಂಡ ದಿನಾಂಕ, ಸಮಯ ಮತ್ತು ಸ್ಥಳದಲ್ಲಿ 1 ರಿಂದ 3 ನೇ ಆರೋಪಿತರಾದ ನೀವು ಸಮಾನ ಉದೇಶದಿಂದ ಮುಂದುವರೆದು ಕೊಪ್ಪ ಪಟ್ಟಣದ ಕಾಯಿ ಮಾರುಕಟ್ಟೆಯಲ್ಲಿರುವ ಎಸ್ .ಆರ್. ಮಂಜುನಾಥ ರವರ ಬಾಬ್ತು ಸ್ವಾತಿ ಟ್ರೇಡರ್ಸ್ ಮೇಲ್ಭಾಗದಲ್ಲಿರುವ ವಾಸದ ಮನೆಯ ಮುಂಭಾಗದಲ್ಲಿ ಆರೋಪಿತರಾದ ನೀವು ಸಮಾನ ಉದ್ದೇಶದಿಂದ ಚಾಸಾ.1 ವರುಣ್ ಮತ್ತು ಚಾಸಾ.2 ಮಂಜುನಾಥ ರವರನ್ನು ನಿಮ್ಮ ಪೈಕಿ 2 ನೇ ಆರೋಪಿತನು ಮಾತನಾಡಬೇಕು ಮೇಲೆ ಬನ್ನಿ ಎಂದು ಕರೆದು ಅಂಗಡಿಯ ಮೇಲ್ಭಾಗದ ಮನೆಯ ಮುುಂಭಾಗದ ವರಾಂಡಕ್ಕೆ ಕರೆದುಕೊಂಡು ಹೋಗಿದ್ದು, 1 ರಿಂದ 3 ನೇ ಆರೋಪಿಗಳಾದ ನೀವು ಚಾಸಾ.1 ಮತ್ತು 2 ರವರಿಗೆ ಅವಾಚ್ಯ ಶಬ್ದಗಳಿಂದ ಬೈಯ್ದು, ನಿಮ್ಮ ಪೈಕಿ 1 ನೇ ಆರೋಪಿಯಾದ ನೀವು ವರಾಂಡದ ಬಾಗಿಲನ್ನು ಹಾಕಿ ಚಾಸಾ.1 ಮತ್ತು 2 ರವರನು ಅಕ್ರಮವಾಗಿ ಪ್ರತಿಬಂಧನದಲ್ಲಿಟ್ಟು **ಭಾರತೀಯ ನ್ಯಾಯ ಸಂಹಿತ (ಬಿ.ಎನ್.ಎಸ್.), 2023 ಕಲಂ 127(2) ಸಹ ಕಲಂ 3(5)** ರೀತ್ಯಾ ಶಿಕ್ಷಾರ್ಹವಾದ ಅಪರಾಧವನ್ನು ನ್ಯಾಯಾಲಯದ ಸಂಜ್ಞೆಯಲ್ಲಿ ಮಾಡಿರುತ್ತೀರಿ.

ಪ್ರ:1ಃ ಈಗ ಓದಿ ಹೇಳಿದ ದೋಷಾರೋಪಣೆ ತಿಳಿಯಿತೆ?

ಉಃ ಆ-1 ತಿಳಿಯಿತು

ಆ-2 ತಿಳಿಯಿತು

ಆ-3 ತಿಳಿಯಿತು

ಪ್ರಃ2ಃ ತಪ್ಪು ಒಪ್ಪಿಕೊಳ್ಳುತ್ತಿರೋ ಅಥವಾ ವಿಚಾರಣೆ ಆಗಬೇಕಾ?

ಉಃ ಆ-1 ವಿಚಾರಣೆಯಾಗಬೇಕು

ಆ-2 ವಿಚಾರಣೆಯಾಗಬೇಕು

ಆ-3 ವಿಚಾರಣೆಯಾಗಬೇಕು

ಈ ಮೇಲ್ಕಂಡ ದೋಷಾರೋಪಣೆಯನ್ನು ನಾನೇ ಸ್ವತಃ ಆರೋಪಿತರಿಗೆ ಓದಿ ಹೇಳಿ, ಅವರು ಕೊಟ್ಟ ಉತ್ತರವನ್ನು ಬರೆದುಕೊಂಡಿದ್ದು, ಮೇಲೆ ಹೇಳಿರುವುದು ಸತ್ಯ ಹಾಗೂ ಸರಿಯಾಗಿದೆ ಎಂದು ದೃಡೀಕರಿಸುತ್ತೇನೆ.

ದಿನಾಂಕ 13.08.2025.

ಸಹಿ/- 13.08.2025.
ಸಿವಿಲ್ ಜಡ್ಜ್ ಮತ್ತು ಪ್ರದನ್ಯಾದಂ.,
ಕೊಪ್ಪ.

*ಆರೋಪಿತರ ಸಹಿಃ*